ಶ್ರೀ ಎ. ಜಿ. ಕೊಡಗಿ.—ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ರೇಷ್ಮೆ ವ್ಯವಸಾಯ ಲಾಭದಾಯಕವಾಗಿ ನಡೆಯುತ್ತಾ ಇದೆ. ಹೆಚ್ಚು ಜನರು ಈ ಒಂದು ಉದ್ಯಮವನ್ನು ಕೈಗೊಂಡಿದ್ದಾರೆ ಇದು ತಮಗೆ ಗೊತ್ತಿದೆ. ಈ ಜಿಲ್ಲೆಯಲ್ಲಿ ಬೈಪೊಲ್ಟೀನ್ ಮಿಶ್ರ ತಳಿಯನ್ನು ಹೆಚ್ಚಿನ ರೀತಿಯಲ್ಲಿ ಒದಗಿಸಿಕೊಡುವುದಕ್ಕೆ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಇದಕ್ಕೆ ಸಬ್ಸಿಡಿಯನ್ನು ಕೊಡುತ್ತೇವೆಂದು ತಾವು ಏನು ವಾಗ್ದಾನವನ್ನು ಕೊಟ್ಟಿದ್ದೀರಿ ಅದನ್ನು ಕೊಡುವುದಕ್ಕೆ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಸಬ್ಸಿಡಿ ಪ್ರಶ್ನೆ ಅದು ಪ್ರತ್ಯೇಕವಾದ ಪ್ರಶ್ನೆ, ಅದನು ತಾವು ಪ್ರತ್ಯೇಕವಾಗಿ ಕೇಳಿದರೆ ನಾನು ಉತ್ತರವನ್ನು ಕೊಡುತ್ತೇನೆ.

MR. DEPUTY SPEAKER.—Next question, Sri K. B. Shivaiah is

SRI M. C. BASAPPA.—Mr. Deputy Speaker.....

MR. DEPUTY SPEAKER.—Already I have given sufficient time 20 minutes–because this is a very important question. I have allowed so many supplementaries.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಯಾರಾದರೂ ಸರ್ಕಾರದ ಕಡೆಯಿಂದ ತಮಗೆ ಸದಸ್ಯರು ಅನಾವಶ್ಯಕ ಪ್ರಶ್ನೆಯನ್ನು ಕೇಳುತ್ತಿದ್ದಾರೆ ಎಂದು ಹೇಳುತ್ತಿದ್ದಾರೆಯೇ ? ತಾವು ಇಲ್ಲಿ ಸರ್ಕಾರಕ್ಕೆ ರಕ್ಷಣೆ ಕೊಡುವುದಕ್ಕೆ ಕುಳಿತುಕೊಂಡಿಲ್ಲ. ನಮಗೆ ಈ ಬಗ್ಗೆ ಸಾಕಷ್ಟು ಮಾತನಾಡುವುದಕ್ಕೆ ಅವಕಾಶ ಕೊಡಬೇಕು, ಮತ್ತು ಸರ್ಕಾರದಿಂದ ಉತ್ತರವನ್ನು ಕೊಡಿಸಬೇಕು.

MR. DEPUTY SPEAKER.—I have also to complete within the specified time.

ಶ್ರೀ ಎಂ. ಸಿ. ಬಸಪ್ಪ.—ತಾವು ಆಗಲೇ ನಾನು ನಿಮಗೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ ಎಂದು ಹೇಳಿದಿರಿ. ತಾವು ಅವಕಾಶ ಕೊಡುತ್ತೀರಿ ಎಂದು ತಿಳಿದುಕೊಂಡು ನಾನು ಕುಳಿತುಕೊಂಡೆ. ಈಗ ತಾವು ನೆಕ್ಸ್ಟ ಕೊಶ್ಚನ್ ಎಂದು ಕೂಗಿದರೆ ನನಗೆ ಅವಕಾಶ ಕೊಟ್ಟಹಾಗೆ ಆಯಿತೇ ?

MR. DEPUTY SPEAKER.—Mr. Basappa, I have called Sri Anna Rao Patil.

ಶ್ರೀ ಎಂ. ಸಿ. ಬಸಪ .—I am very sorry. ನಮ್ಮ ಪಕ್ಷದ ಉಪನಾಯಕರು ಎಷ್ಟೆಷ್ಟು ಪೊಟ್ಟಿಗಳನ್ನು ತಯಾರು ಮಾಡಿದ್ದಾರೆ ಎನ್ನುವುದನ್ನು ಕೇಳಿ ಎಂದು ಹೇಳಿದ್ದರು. ನೀವು ಅವಕಾಶ ಕೊಡುತ್ತಾ ಇಲ್ಲ. ಇದಕ್ಕೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

Developmental Programmes in Aland Taluk

357 *SRI ANNA RAO PATIL KORALI (Aland).—Will the Minister for Rural Development and Panchayat Raj be pleased to state :—

(a) whether Government is aware that Aland Taluk is a Border taluk situated in between Sholapur District of Maharashtra and Gulbarga District of Karnataka;

(b) what development Programes Government have taken up to develop this Border Taluk ;

(c) what are its salient features ? whether the works such as laying of roads from Karnataka to Maharashtra State Highway etc., have been taken up;

(d) whether these roads have been taken up ?

SRI B. RAMAIAH (Minister for Rural Development and Panchayat Raj).—

(a) Yes.

(b) (c) & (d) A list is laid on the Table.* Inter-State Highways are major works and cannot be considered as part of rural development programme.

ಶ್ರೀ ಅಣ್ಣಾರಾವ್ ಪಾಟೀಲ್.—ಸ್ವಾಮಿ, ನನ್ನ ಮೊದಲನೇ (ಎ) ಪ್ರಶ್ನೆಗೆ ಮಾನ್ಯ ಸಚಿವರು ಪೌದು ಎಂದು ಹೇಳಿದ್ದಾರೆ. ನನ್ನ (ಬಿ) ಪ್ರಶ್ನೆಯಲ್ಲಿ ಈ ಗಡಿ ಪ್ರದೇಶದಲ್ಲಿರುವ ತಾಲ್ಲೂಕಿನ ಅಭಿವೃದ್ಧಿಗಾಗಿ ಸರ್ಕಾರದವರು ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ ಎಂದು ಕೇಳಿದ್ದೇನೆ. ನನ್ನ ತಾಲ್ಲೂಕು ಬ್ಯಾಕ್‌ವರ್ಡ್ ತಾಲ್ಲೂಕು, ಬಾರ್ಡರ್ ತಾಲ್ಲೂಕು, ಮತ್ತು ರಿಸರ್ವ್ ಕಾನ್‌ಸ್ಟಿಟ್ಯೂಯೆನ್ಸಿ ಆಗಿದೆ. ಅಲ್ಲಿ ಏನೇನು ವಿಶೇಷ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಿಲ್ಲ. ಅದಕ್ಕೆ ಉತ್ತರವನ್ನು ಮಾನ್ಯ ಮಂತ್ರಿಯವರು ಹೇಳುತ್ತಾರೆಯೇ ?

ಶ್ರೀ ಬಿ. ರಾಮಯ್ಯ.—ಸ್ವಾಮಿ, ಈಗಾಗಲೇ ನಾನು ಸಾಕಷ್ಟು ವಿಷಯಗಳನ್ನು ಹೊಂದಿಸಕ್ಕಂಥ ಪಟ್ಟಿಯನ್ನು ಈ ಸದನದ ಮುಂದೆ ಮಂಡಿಸಿದ್ದೇನೆ. ಈಗಾಗಲೇ ರಾಜ್ಯದ ಬೆಳಗಾಂ ಮತ್ತು ಗುಲ್ಬರ್ಗ ವಿಭಾಗಕ್ಕೆ ಮತ್ತು ಸಂಬಂಧಪಟ್ಟಂಥ ಒಂದೊಂದು ವಿಭಾಗಕ್ಕೂ ೧ ಲಕ್ಷ ೫೦ ಸಾವಿರ ರೂಪಾಯಿಗಳನ್ನು ವಿಶೇಷವಾಗಿ ಈ ಅಭಿವೃದ್ಧಿ ಕಾಮಗಾರಿಗಳಿಗಾಗಿ ಕೊಡುತ್ತಿದ್ದೇವೆ. ಆ ಭಾಗದಲ್ಲಿ ಆಲಂದ್ ಎಂಬ ಒಂದು ತಾಲ್ಲೂಕಿಗೆ ೧೯೭೨–೭೩ರಲ್ಲಿ ಮತ್ತು ೧೯೮೦–೮೧ರ ವರೆಗೆ ಕೊಟ್ಟಿರತಕ್ಕಂಥಾದ್ದರ ಬಗ್ಗೆ ನಾನು ಸಂಕ್ಷಿಪ್ತವಾದ ವಿವರವನ್ನು ಹೊಂದಿದ್ದೇನೆ. ಅದನ್ನು ಮಾನ್ಯ ಸದಸ್ಯರಿಗೆ ನಾನು ಒದಗಿಸಿಕೊಡುವುದಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಅಣ್ಣಾರಾವ್ ಪಾಟೀಲ್.—ಇದರಲ್ಲಿ ನನ್ನ ಪ್ರಶ್ನೆ ಏನಿದೆ ಎಂದರೆ ಅದು ಬಾರ್ಡರ್ ತಾಲ್ಲೂಕು ಬ್ಯಾಕ್‌ವರ್ಡ್ ತಾಲ್ಲೂಕು, ಅಲ್ಲದೇ ರಿಸರ್ವ್ಡ್ ಕಾನ್‌ಸ್ಟಿಟ್ಯೂಯೆನ್ಸಿ ಆಗಿದೆ. ಅಲ್ಲಿ ಡೆವೆಲಪ್‌ಮೆಂಟ್ ಪ್ರೋಗ್ರಾಮನ್ನು ತೆಗೆದುಕೊಳ್ಳತಕ್ಕಂಥಾದ್ದು ಗೌರ್ನಮೆಂಟ್ ಪಾಲಿಸಿಯಾಗಿದೆ. ಅದರಂತೆ ಆ ತಾಲ್ಲೂಕನ್ನು ಡೆವೆಲಪ್ ಮಾಡುವುದಕ್ಕೆ ವಿಶೇಷವಾದ ಕಾರ್ಯಕ್ರಮಗಳನ್ನು ಏನಾದರೂ ಸರ್ಕಾರದವರು ತೆಗೆದುಕೊಂಡಿದ್ದಾರೆಯೇ ? ಅಲ್ಲಿ ಬೇರೆ ಡೆವೆಲಪ್‌ಮೆಂಟ್ ಪ್ರೋಗ್ರಾಂ ಏನಾದರೂ ಇದೆಯೇ ?

ಶ್ರೀ ಬಿ. ರಾಮಯ್ಯ.—ಸ್ವಾಮಿ, ಅಂತರರಾಜ್ಯ ಕಾಮಗಾರಿಗಳ ಅಡಿಯಲ್ಲಿ ಅಲ್ಲಿ ತೆಗೆದುಕೊಳ್ಳತಕ್ಕಂಥ ಕೆಲಸಕಾರ್ಯಗಳ ಬಗ್ಗೆ ಈಗಾಗಲೇ ಒಂದು ಪಟ್ಟಿಯನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆ. ರಾಜ್ಯದ ಅಂಚಿನ ಜಿಲ್ಲೆಗಳಲ್ಲಿ ಬರುವಂಥ ತಾಲ್ಲೂಕುಗಳಿಗೆ ೧ ಲಕ್ಷ ೫೦ ಸಾವಿರ ರೂಪಾಯಿಗಳನ್ನು ವಿಶೇಷವಾಗಿ ಈ ಅಭಿವೃದ್ಧಿ ಕಾರ್ಯಕ್ಕಾಗಿ ನಾವು ಕೊಟ್ಟಿದ್ದೇವೆ. ಅದರಲ್ಲಿ ಆಲಂದ್ ತಾಲ್ಲೂಕಿಗೆ ಸ್ವಲ್ಪ ಭಾಗ ತಲುಪಿದೆ ಎಂದು ನನ್ನ ಅಭಿಪ್ರಾಯ.

ಶ್ರೀ ಅಣ್ಣಾರಾವ್ ಪಾಟೀಲ್.—ಸ್ವಾಮಿ, ನಾನು ಈಗ ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಾವು ಕೊರಾಲಿಯಲ್ಲಿ ರೋಡ್ ಮಾಡಿಕೊಡಬೇಕೆಂದು ಕೇಳಿದ್ದೇವೆ. ಅದನ್ನು ಮಾಡಿಲ್ಲ. ಈ ರೀತಿ ತೊಂದರೆ ಇರುವುದರಿಂದ ಅಲ್ಲಿ ಬಾಳೆಗಿಡ ಒಂದಕ್ಕೆ ೩ ರೂ. ನಂತೆ ಮಾರುತ್ತಿದ್ದಾರೆ. ಆದರೆ ಅದು ಬೆಂಗಳೂರಿನಲ್ಲಿ ೩ ರೂಪಾಯಿಗೆ ಒಂದು ಡಜನ್ ಸಿಕ್ಕುತ್ತಾ ಇದೆ. ರೈತರ ಕಷ್ಟವನ್ನು ಗಮನಕ್ಕೆ ತೆಗೆದುಕೊಂಡು ನನ್ನ ರಿಸರ್ವ್ಡ್ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಏನಾದರೂ ಸ್ಪೆಷಲ್ ಪ್ರೋಗ್ರಾಂನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಹಾರ್ಟಿಕಲ್ಚರಲ್ ಪ್ರೋಗ್ರಾಂನ್ನು ತೆಗೆದುಕೊಳ್ಳುವ ಬಗ್ಗೆ ಮಾನ್ಯ ಸಚಿವರು ಏನು ಹೇಳಿಲ್ಲ. ಮಾನ್ಯ ಸಚಿವರು ಈ ಇಲಾಖೆಯ ಸಚಿವರಾಗಿ ಒಂದು ವರ್ಷವಾಯಿತು. ಇಲ್ಲಿಯವರೆಗೆ ನಮ್ಮ ತಾಲ್ಲೂಕಿಗೆ ಅವರು ಭೇಟಿ ಕೊಟ್ಟಿಲ್ಲ. ಈ ಬಗ್ಗೆ

---

* Copy Placed in the Karnataka Legislative Library Vide No. 9 dated.

ನಾನು ಬೇಕಾದಷ್ಟು ಸಾರಿ ಕೇಳಿದ್ದೇನೆ. ನಮ್ಮ ತಾಲ್ಲೂಕು ಬಹಳ ಕಷ್ಟನಷ್ಟದಲ್ಲಿದೆ ಎಂಬುದನು ಅವರು ಗಮನಕ್ಕೆ ತೆಗೆದುಕೊಳ್ಳಬೇಕು. ಆಲಂದ್ ಮಾರ್ಗವಾಗಿ ಔರಂಗಾಬಾದ್‌ಗೆ ಬಸ್‌ಗಳು ಬರುತ್ತವೆ ಔರಂಗಾಬಾದ್ ಮತ್ತು ಕಣಗುಟ್ಟು ಇಲ್ಲಿ ಕೂಡ ಬಸ್ ಸಂಚಾರ ಸಾಕಷ್ಟು ಇದೆ. ಆದ್ದರಿಂದ ಈ ಭಾಗಕ್ಕೆ ಸರ್ಕಾರದವರು ನ್ಯಾಷನಲ್ ಹೈವೇ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ರೆಕ್‌ಮೆಂಡ್ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಈಗತಾನೇ ಮಾನ್ಯ ಸದಸ್ಯರು ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಅವರ ಆಶಯವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಈ ಅಧಿವೇಶನ ಮುಗಿದ ನಂತರ ನಾನು ಅಲ್ಲಿಗೆ ಹೋಗಿ ನೋಡಿಕೊಂಡು ಬರುತ್ತೇನೆ. ಮಾನ್ಯ ಸದಸ್ಯರು ವಿಶೇಷ ರೀತಿಯಲ್ಲಿ ಆ ಭಾಗಕ್ಕೆ ಸೌಲಭ್ಯಗಳನ್ನು ಮಾಡಿಕೊಡಬೇಕು, ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಾವು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಅಣ್ಣಾರಾವ್ ಪಾಟೀಲ್.—ಸ್ವಾಮಿ, ಅಲ್ಲಿ ಪಾಪ್ಯುಲೇಷನ್ ಹೆಚ್ಚಾಗುತ್ತದೆ, ಅಲ್ಲಿ ಸರಿಯಾದ ಸ್ಕೂಲ್‌ಗಳು ಇಲ್ಲ, ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗಳು ಇಲ್ಲ, ಇಂಡಸ್ಟ್ರೀಸ್ ಇಲ್ಲ. ಇದನ್ನೂ ಅವರು ಗಮನಕ್ಕೆ ತೆಗೆದುಕೊಳ್ಳಬೇಕು.

MR. DEPUTY SPEAKER.—He has promised. He is coming to your constituency.

Accommodation for Bus Stand at Puttur, Dakshina Kannada District

414 SRI K. RAMBHAT (Puttur).—Will the Minister for Transport and Minor Irrigation be pleased to state :—

(a) number of years passed after taking over the Bus Stand at Puttur in South Kanara District by the K.S.R.T.C. ;

(b) whether it has come to the notice of the Government that the inconvenience caused to the vehicles due to paucity of parking place in the existing Bus stand;

(c) whether is there any proposal before the Government to shift the existing building and for constructing of New Building and extending the Bus stand;

(d) if so, when it will be provided ?

SRI M. M. J. SADYOJATHA (Minister for Transport and Minor Irrigation).—

(a) K.S.R.T.C. took over the possession of the Bus Stand at Puttur on 22-2-1979.

(b) Yes.

(c) K.S.R.T.C. is contemplating to construct the bus stand on the site belonging to the Road Transport Corporation.

(d) The construction work of the Bus stand will be taken up after the improvement of financial position of the Road Transport Corporation.